ಹೇಳುವಂತೆ ಈಗ ಆತ ತುಂಬ ಬದಲಾಗಿದ್ದಾನಂತೆ. ಬದಲಾಪುರಕ್ಕೆ ಹೋಗಿ ಸಂಜೆ ವೇಳೆಗೆ ಅಂಧೇರಿ ತಲುಪುವುದು ಗಡಿಬಿಡಿಯ ಪ್ರಯಾಣವಾಗುತ್ತದೆ. ದೀಪಕ್ ನನ್ನನ್ನು ಅಷ್ಟು ಬೇಗ ಕಳುಹಿಸಲು ಒಪ್ಪುವವನಲ್ಲ, ''ಶಾಮ್‌ಕೊ ಬೈಠೇಂಗೆ'' ಅಂತ ಬಿಯರ್ ಕುಡಿಯುವ ಪ್ಲಾನ್ ಹಾಕಿಯಾನು. ಹಾಗಾಗಿ, ಅಂಧೇರಿಯ ಪ್ರೋಗ್ರಾಮನ್ನು ನಾಡದ್ದಿಗೆ ಮಾಡೋಣ ಅಂತ ತಿಳಿಸಿ ಬದಲಾಪುರಕ್ಕೆ ಹೊರಟೆ, ಲೋಕಲ್ ಟ್ರೈನಿನಲ್ಲಿ.

ನನ್ನ ಡಿಪಾರ್ಟ್‌ಮೆಂಟಿನ ಬಾಸಿನ ಸಹಾಯಕನಾಗಿದ್ದವ ಸುಭಾಷ್. ಹಾಗಾಗಿ, ಡಿಪಾರ್ಟ್‌ಮೆಂಟಿನ ಎಲ್ಲ ಸೆಕ್ಷನ್‌ನವರಿಗೂ ಬೇಕಾದ ವ್ಯಕ್ತಿ, ನನ್ನ ಸೆಕ್ಷನ್‌ನ ಜನರಿಗೂ ನನಗೂ ಆಪ್ತನಾದ. ''ಏನು ಸರ್'', ''ಹೇಗಿದ್ದೀರಿ ಮೂರ್ತಿ ಸಾಬ್'' ಅಂತೆಲ್ಲ ಬಂದು ಮಾತಾಡಿಸಿಕೊಂಡು, ಮಾತ್ರವಲ್ಲದೆ ಡಿಪಾರ್ಟ್‌ಮೆಂಟಿನ ಎಲ್ಲರಲ್ಲೂ ಇದೇ ಸ್ನೇಹಭಾವದಿಂದ ಮಾತಾಡಿಸುವವನು. ದೀಪಕ್ ನನ್ನ ಸೆಕ್ಷನ್‌ನಲ್ಲಿ ಫಿಟ್ಟರ್ ಆಗಿದ್ದವನು. ಮರಾಠಿ ನಾಟಕ, ಸಾಹಿತ್ಯಗಳಲ್ಲಿ ಆಸಕ್ತಿಯಿರುವ ವ್ಯಕ್ತಿ. ನನಗೆ ಆತ್ಮೀಯನಾಗಲು ಇದೂ ಒಂದು ಕಾರಣ. ದೀಪಕ್ ಹಾಗೂ ಸುಭಾಷ್ ಕಂಪನಿಯ ಹಿಂಬದಿಯಲ್ಲಿದ್ದ ಕ್ವಾಟ್ರರ್ಸಿನಲ್ಲಿ ವಾಸವಾಗಿದ್ದವರು. 'ಮೇರಾ ಕ್ಲಾಸ್‌ಮೇಟ್ ಹೈ ಸಾಬ್' ಅಂತಲೂ ಸುಭಾಷ್‌ನ ಗೆಳೆತನದ ಬಗ್ಗೆ ಹೇಳುತ್ತಿದ್ದ. ಹಾಗಾಗಿ, ಇಬ್ಬರ ನಡುವೆ ಸಲುಗೆ ಗಾಢವಾಗಿ ಬೆಳೆದು ಬಂದಿತ್ತು. ಇಬ್ಬರೂ ಸಾತ್ವಿಕ ಸ್ವಭಾವದವರು. ದತ್ತಾ ಸಾಮಂತ್ ಯೂನಿಯನ್ ಇದ್ದಾಗಲೂ ನನ್ನಂತಹ ಅಧಿಕಾರಿಯೊಂದಿಗೆ ಸೌಹಾರ್ದ ಸ್ನೇಹದಿಂದ ವರ್ತಿಸುತ್ತಿದ್ದರು. ಇಬ್ಬರೂ ವೈಯಕ್ತಿಕ ವಿಚಾರಗಳನ್ನು ಹೇಳಿಕೊಳ್ಳುವಷ್ಟು ನನಗೆ ಹತ್ತಿರವಾಗಿದ್ದರು. ದೀಪಕನ ತಂದೆ ನಿವೃತ್ತರಾದ ಮೇಲೆ ಕ್ವಾಟ್ರರ್ಸ್ ಬಿಟ್ಟು ದೊಂಬಿವಲಿಗೆ ಹೋದದ್ದು. ದೀಪಕ್ ಮದುವೆ ಮಾಡಿಕೊಂಡ ಅನಂತರ ಬದಲಾಪುರಕ್ಕೆ ಶಿಫ್ಟ್ ಆದ. ಸುಭಾಷ್ ಮಾತ್ರ ತಂದೆ ತಾಯಿ ಜೊತೆ ಅದೇ ಕ್ವಾಟ್ರರ್ಸ್‌ನಲ್ಲಿ ಮುಂದುವರಿದ. ಆಗಾಗ ಸುಭಾಷನ ಕೆಲವಾರು ವೈಯಕ್ತಿಕ ಆದರೆ ಅಷ್ಟೇ ಚಿಂತಾಜನಕ ವಿಷಯಗಳನ್ನು ದೀಪಕ್ ಹೇಳುತ್ತಿದ್ದುದುಂಟು. ''ಇವ ತುಂಬ ಸಾಧು ಮನುಷ್ಯ ಸಾಬ್, ಸ್ವಲ್ಪ ಬೋಳೆ ಸ್ವಭಾವ ಕೂಡ. ಎಲ್ಲರೂ ಅವನ ಬೋಳೆ ಸ್ವಭಾವವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಉಳಿದವರ ವಿಷಯ ಬಿಡಿ, ಅವನ ತಂದೆ ಕೂಡ ಹಾಗೆ ಮಾಡಿದ್ದಾರೆ'' ಎಂದು ಹೇಳಿದ್ದ ನೆನಪು. ನಂಬುವುದು ಕಷ್ಟ ಅಂತನ್ನಿಸಿತ್ತು. ಮತ್ತೂ ಹಲವಾರು ವಿಚಾರಗಳನ್ನು ಹೇಳಿದ್ದ.

''ನಾನು ಒಂದು ವಿಷಯ ಹೇಳ್ತೇನೆ, ಶಾಲೆಗೆ ಹೋಗುತ್ತಿದ್ದ ಸಮಯ ಶಿಸ್ತಿನ ಹೆಸರಿನಲ್ಲಿ ಹೆದರಿಸಿ ಬೆದರಿಸಿ ಹದ್ದುಬಸ್ತಿನಲ್ಲಿಡುತ್ತಿದ್ದ ಇವನ ಅಪ್ಪ, ದೊಡ್ಡವನಾಗಿ ಸಂಪಾದನೆ ಆರಂಭಿಸಿದ ಬಳಿಕವೂ ಅದನ್ನೇ ಮುಂದುವರಿಸ್ತಾ ಇದ್ರು. ನಾವು ಒಂದೇ ಬಿಲ್ಡಿಂಗಿನ ಅಕ್ಕಪಕ್ಕದ ಖೋಲಿಯಲ್ಲಿ ಇದ್ದವರು, ನನಗೆ ಎಲ್ಲಾ ಗೊತ್ತು.''

''ಸುಭಾಷನ ತಂದೆ ಎಲ್ಲಿ ಕೆಲಸ ಮಾಡ್ತಾರೆ?''

''ಎಲ್ಲಿಂದ? ಕೆಲಸ ಇಲ್ಲ ಏನೂ ಇಲ್ಲ. ಮೊದಲು ಇದೇ ಕಂಪನಿಯಲ್ಲಿ ಕೆಲಸ ಮಾಡ್ತಾ ಇದ್ರು. ರಿಟೈರ್ ಆದಮೇಲೆ ಮಗನಿಗೆ ನೌಕರಿ ಸಿಕ್ಕಿತು. ತಂದೆಯ ಹೆಸರಿನಲ್ಲಿದ್ದ ಕ್ವಾಟ್ರರ್ಸು ಮಗನ ಹೆಸರಿಗಾಯಿತು, ಅಷ್ಟೇ ಬದಲಾವಣೆ. ಅದೇ ಖೋಲಿಯಲ್ಲಿ ಜೀವನ ಮುಂದುವರಿಯಿತು. ಈಗ ಇವ ತಿಂಗಳು ತಿಂಗಳು ಸಂಬಳವನ್ನು ಅಪ್ಪನ ಕೈಗೆ ಕೊಡಬೇಕು. ತಾನು ಸಂಪಾದಿಸಿದ ದುಡ್ಡನ್ನು ಇಟ್ಟುಕೊಳ್ಳುವ ಸ್ವಾತಂತ್ರ್ಯ ಕೂಡಾ ಇಲ್ಲ ಇವನಿಗೆ. ಯಾವಾಗಲೋ ಒಮ್ಮೆ ಅಕಸ್ಮಾತ್ತಾಗಿ ತಿಂಗಳ ಸಂಬಳ ಕಮ್ಮಿ ಆಯಿತೋ ಇವನಿಗೆ ಏಟು. ಸಂಬಳದ ದುಡ್ಡು ಇಟ್ಟುಕೊಂಡಿರಬಹುದೆಂಬ ಗುಮಾನಿ ಅಪ್ಪನಿಗೆ. ಮೊದಲು ಬೆತ್ತ ಇತ್ತು, ಈಗ ಬೆಲ್ಟು, ಅಷ್ಟೆ.''

''ಏ... ಹೋಗೋ! ಇದು ನಿಜ ಅಂತ ನಂಬವುದಿಲ್ಲ ನಾನು'' ಅಂತ ತಳ್ಳಿ ಹಾಕಿದೆ. ಆದರೆ,